# ದ. ರಾ. ಬೇಂದ್ರೆಯವರ ಕಾವ್ಯದಲ್ಲಿ ಸ್ತ್ರೀ ಸಂವೇದನೆಯ ಭಿನ್ನ ನೆಲೆಗಳು

**ವೆಂಕೋಬರಾವ್ ಎಂ.**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ
ಎಂ.ಇ.ಎಸ್. ಶಿಕ್ಷಣ ಮಹಾವಿದ್ಯಾಲಯ
ರಾಜಾಜಿನಗರ, ಬೆಂಗಳೂರು.

Article Link: https://aksharasurya.com/2023/12/m-venkoba-rao/

## ABSTRACT:

ಕನ್ನಡ ಸಂಸ್ಕೃತಿಯ ಒಂದು ಅವಿಭಾಜ್ಯ ಭಾಗವಾಗಿರುವ ದ.ರಾ. ಬೇಂದ್ರೆಯವರು ಕನ್ನಡವನ್ನು ಹಾಗೂ ಕನ್ನಡ ನಾಡನ್ನು ಅಖಂಡವಾಗಿ ಪ್ರೀತಿಸಿದ ಮಾಂತ್ರಿಕ ಕವಿ. ಬಡತನ, ಸಿರಿತನ ಕಡೆತನಕ ಉಳಿದಾವೇನ ಎಂಬುದು ಅವರ ದೃಷ್ಟಿಯಾಗಿತ್ತು. 'ಎನ್ನ ಪಾಡೆನಗಿರಲಿ ಅದರ ಹಾಡನ್ನಷ್ಟೇ ನೀಡುವೆನು ರಸಿಕ ನಿನಗೆ' ಎಂಬ ಸಂಕಲ್ಪವು ಅವರ ಕಾವ್ಯದ ಮೂಲ ದೃಷ್ಟಿಯಾಗಿತ್ತು. ದೈತ್ಯ ಪ್ರತಿಭೆಯಾದ ಬೇಂದ್ರೆಯವರಿಗೆ ಉತ್ತರ ಕನ್ನಡದ ದೇಸಿ ಕೇವಲ ಉಪಭಾಷೆಯಾಗದೆ, ಒಂದು ಸಾಂಸ್ಕೃತಿಕ ಪರಂಪರೆಯ ಬಳುವಳಿಯಾಗಿ ಬಂದಿದೆ. ದೇಸಿ, ಗೇಯ, ರೂಪಗಳು ಮರಾಠಿ ಗೇಯ ರೂಪಗಳೊಂದಿಗೆ ಮೇಳೈಸಿಕೊಂಡು ಬೇಂದ್ರೆಯವರ ಕಾವ್ಯಕ್ಕೆ ಗೇಯತೆಯ ಸೊಬಗನ್ನು ಮೂಡಿಸಿವೆ. ಕುಣಿಯೋಣ ಬಾರಾ, ಗಮಗಮಾ ಗಮಾಡಿಸ್ತಾವ, ನಾದಲೀಲೆ, ಕುರುಡು ಕಾಂಚಾಣ, ನೀಹಿಂಗ ನೋಡಬ್ಯಾಡ ನನ್ನ ಇನ್ನಿತರ ಕವಿತೆಗಳು ಕವಚ ಕುಂಡಲಧಾರಿಯಾಗಿಯೇ ಹುಟ್ಟಿದ ಕರ್ಣನಂತೆ ಗೇಯತೆಯೊಂದಿಗೆ ಮೂಡಿ ಬಂದಿದೆ. ಇವರ ಕಾವ್ಯದಲ್ಲಿ ಜಾನಪದಪರಂಪರೆ ಮುಂದುವರೆದ ಸೂಚನೆಯಂತೆ ಕನ್ನಡದ ಕಾವ್ಯಭಾಷೆಯ ಸಾತತ್ಯವನ್ನು ಉಳಿಸುವ ಸಿದ್ಧಿಯು ನಡೆದಿದೆ. ಬದುಕೇ ಕಾವ್ಯವಾಗುತ್ತಾ ಹೋಗುವ ಪವಾಡ ಸದೃಶ್ಯ ಕ್ರಿಯೆ ಬೇಂದ್ರೆಯವರ ಕಾವ್ಯದ ವೈಶಿಷ್ಯವಾಗಿದೆ. ಭಾಷಣ ಮತ್ತು ಕಾವ್ಯವಾಚನದಲ್ಲಿ ಅಸದೃಶವಾದ ಸೃಜನಶೀಲ ಪ್ರತಿಭೆಯನ್ನು ಬೇಂದ್ರೆಯವರು ಹೊಂದಿದ್ದರು. ಕವಿತೆಯನ್ನು ಸಹೃದಯದ ಹೃದಯಕ್ಕೆ ಮುಟ್ಟಿಸಬೇಕೆಂದು ಅವರ ಆಗ್ರಹವಾಗಿತ್ತು. ಸೃಜನಾತ್ಮಕವಾದ ಕಾವ್ಯ ವಾಚನ ಕ್ರಿಯೆಯನ್ನು ಹೊಂದಿದ್ದ ಬೇಂದ್ರೆಯವರು ಸದಾ ಕಾವ್ಯರಚನೆ, ವಿಮರ್ಶೆ, ನಾಟಕ, ಭಾಷಣಗಳು, ಹೃದಯಸಂವಾದ ಹಾಗೂ ಸಂಭಾಷಣೆಗಳ ಮುಖೇನಾ ಸದಾ ಚೈತನ್ಯಮಯವಾಗಿ ಚುರುಕಾಗಿದ್ದರು. ತಾಯಿಯನ್ನು ವಿಶ್ವಮಾತೆಯಾಗಿ, ಭೂಮಾತೆಯಾಗಿ, ಭಾರತಮಾತೆಯಾಗಿ ಕಾಣುತ್ತಾ, ಗೌರವ ಆದರದಿಂದ ತಮ್ಮ ಕವನಗಳಲ್ಲಿ ಚಿತ್ರಿಸಿದ್ದಾರೆ ಹೆಣ್ಣು ಶಕ್ತಿಸ್ವರೂಪಿಣಿಯಾಗಿದ್ದು, ಬದುಕಿನಲ್ಲಿ ಬರುವ ಸಂಕಷ್ಟಗಳನ್ನು ಎದುರಿಸುತ್ತಾ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ಮಗಳಾಗಿ, ತಾಯಿಯಾಗಿ, ಹೆಂಡತಿ ಮತ್ತು ಸಹೋದರಿಯಾಗಿ ಸ್ತ್ರೀಯರನ್ನು

ಕಾವ್ಯದಲ್ಲಿ ಬೇಂದ್ರೆಯವರು ಕಟ್ಟಿಕೊಟ್ಟಿದ್ದಾರೆ, ಅವರ ಕಾವ್ಯದಲ್ಲಿ ಸ್ತ್ರೀ ಸಂವೇದನೆಯ ಬಹುಮುಖ ಚಿಂತನೆಗಳನ್ನು ಕಾಣಬಹುದಾಗಿದೆ.

**KEY WORDS:**

ನೆಲ, ಅನುಭವ, ಬೇಂದ್ರೆ, ತಾಯಿ, ಪ್ರೇಯಸಿ, ಮಡದಿ, ಮಗಳು.

**ಪ್ರಸ್ತಾವನೆ:**

ಬೇಂದ್ರೆಯವರ ಕಾವ್ಯದ ಗಾರುಡಿಯ ಪ್ರಕಾಶ, ರಸಭಾವ, ಶಾಂತಿ, ಕಾಂತಿ, ಜೀವನ ಪ್ರೀತಿಗೆ ಸಹೃದಯರು ಮರುಳಾಗಿದ್ದಾರೆ. ಬೇಂದ್ರೆಯವರು ತಮ್ಮ 'ಸಾಹಿತ್ಯದ ವಿರಾಟ್ ಸ್ವರೂಪ' ಎಂಬ ಕೃತಿಯಲ್ಲಿ 'ನನ್ನ ಭಾವನೆಯಲ್ಲಿ ಸ್ಫೂರ್ತಿಯ ಸೆಲೆ ತಾಯಿ' ಎಂದು ಹೇಳಿಕೊಂಡಿದ್ದಾರೆ. ತಾಯಿಯೊಬ್ಬಳಲ್ಲದೇ, ವಿಶ್ವಮಾತೆ, ಭೂಮಾತೆ, ಭಾರತ ಮಾತೆ, ಕನ್ನಡ ಮಾತೆ, ಈ ಎಲ್ಲಾ ತಾಯಿಯರನ್ನೂ ಗೌರವ, ಆದರದಿಂದ ಕಂಡು, ತಮ್ಮ ಕವನಗಳಲ್ಲಿ ಲೌಕಿಕವಾದ ವಸ್ತುವನ್ನು ಅಲೌಕಿಕವಾದ ರೀತಿಯಲ್ಲಿ ಚಿತ್ರಿಸಿ ಯಶಸ್ವಿಯಾಗಿದ್ದಾರೆ. ಭಾರತೀಯ ಸಮಾಜ ಎಲ್ಲ ಕಾಲದಿಂದಲ್ಲೂ ಸ್ತ್ರೀಯನ್ನು ಗೌರವದಿಂದ ಕಾಣುತ್ತ ಬಂದಿದೆ. ಆದರೂ ಹಲವು ಸಂದರ್ಭಗಳಲ್ಲಿ ಸ್ತ್ರೀ ಸಂಕಟಕ್ಕೆ, ಶೋಷಣೆಗೆ, ದಾಸ್ಯಕ್ಕೆ ಗುರಿಯಾಗಿದ್ದಾಳೆ. ಶಕ್ತಿ ಸ್ವರೂಪಿಣಿಯಾದ ಹೆಣ್ಣು ಹೀಗೆಲ್ಲ ನೊಂದು, ನಲುಗಿರುವುದನ್ನು ಕಂಡು ಬೇಂದ್ರೆಯವರು ತುಂಬ ಬೇಸರಗೊಂಡಿದ್ದಾರೆ. ಸಾಮಾಜಿಕ ಕಟ್ಟುಪಾಡುಗಳ ದೆಸೆಯಿಂದಾಗಿ, ದೇಶಾಚಾರದ ದೆಸೆಯಿಂದಾಗಿ, ಅಂಧಶ್ರದ್ಧೆಗಳ ಕಾರಣವಾಗಿ ಸ್ತ್ರೀಯರು ಹಲವು ದಿಕ್ಕುಗಳಿಂದ ಬಂಧನಕ್ಕೆ ಗುರಿಯಾಗಿದ್ದಾರೆ. ಬೇಂದ್ರೆಯವರು ಸ್ತ್ರೀಹೃದಯದ ಅಂತರಾಳವನ್ನು ಹೊಕ್ಕು ಅಲ್ಲಿನ ತುಮುಲಗಳನ್ನು ಮೇಲೆತ್ತಿ ತಂದಿದ್ದಾರೆ. ಸ್ತ್ರೀ ಸಮಸ್ಯೆಯ ವಿವಿಧ ಮುಖಗಳಿಗೆ ಕಾವ್ಯರೂಪವನ್ನು ನೀಡಿ, ಸ್ತ್ರೀ ಜೀವನದ ಅನೇಕ ವ್ಯಥೆಗಳನ್ನು ಬೇಂದ್ರೆಯವರು ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

ಮನುಷ್ಯನು ತಾನು ಒಲಿಯಲಿರುವ ಹೆಣ್ಣಿನ, ಒಲಿದಿರುವ ಹೆಣ್ಣಿನ ವಿಚಾರವಾಗಿ ತಾಳುವ ಭಾವಗಳು, ಮೂಡಿಕೊಳ್ಳುವ ಕಲ್ಪನೆಗಳು, ವೈವಿಧ್ಯಮಯವೂ, ಅನಂತವೂ ಆಗಿದೆ. ಅವರ ಕಾವ್ಯದಲ್ಲಿ ಹೆಣ್ಣನ್ನು ಮಗಳಾಗಿ ಕಂಡಿರುವ ಹಲವು ರಸಮಯವಾದ ಚಿತ್ರಗಳಿವೆ. ತಮ್ಮ ಸಂಪರ್ಕಕ್ಕೆ ಬಂದ ಸ್ತ್ರೀ ಸಾಹಿತಿಗಳನ್ನು ಸೋದರಿಯಾಗಿ ಆತ್ಮೀಯವಾಗಿ ಕಂಡ ಸನ್ನಿವೇಶಗಳು ಸಾಕಷ್ಟಿವೆ. ಹೀಗೆ ದ.ರಾ. ಬೇಂದ್ರೆಯವರ ಕಾವ್ಯದಲ್ಲಿನ ಸ್ತ್ರೀ ಸಂವೇದನೆಯ ಹಲವು ಮುಖಗಳು ಇಲ್ಲಿವೆ.

## I. ನೆಲದ ಮತ್ತು ನೆಲೆಯ ಅನುಭವ:

**"ಆಸೆಯ ತಾಯಿಯು ಸ್ತ್ರೀ ಮಾತ್ರ ಛಾಯೆಯು**
**ಪುರುಷಾರ್ಥ ಕೆತ್ತಿದ ಮೂರ್ತಿಯದು**
**ಜೀವನವನೆ ಮಹಾಯಜ್ಞಮಾಡಿದ ಹಾಗೆ**
**ಸ್ವಾಹಾ ಸ್ವಾಹಾ ಎಂದು ನಡೆಸಿದಳು.**
**ಬಂಡಾಯ ಕಾಲದ ಖಂಡಿತ ಜೀವನ**
**ಉಂಡವಳು ಅವಳಿಗೆ ಏನು ಕಹಿ?**
**ಕಣ್ಣಿನ ಕೊನೆ ಮುತ್ತು ಹೃದಯದ ಒಳ ತುತ್ತು**
**ಸಿಂಪಿ ಬಾಳಿದ ಹಾಗೆ ಬಾಳಿದಳು.**
**ಆಳಾಗಿ ದುಡಿದರು ಅರಸಾಗಿ ಉಂಡಳು**
**ಬಂದ ಭೋಗಕ್ಕೆಲ್ಲಾ ತಾಳಿದಳು"**

ಬೇಂದ್ರೆಯವರು ತಾಯಿಯ ದಿವ್ಯತೆಯನ್ನು ತಿಳಿಸುತ್ತಾ, 'ನಮ್ಮ ತಾಯಿಗೆ ಅಜ್ಜಿ, ನಮ್ಮ ಅಜ್ಜಿಗೆ ನಮ್ಮ ತಾಯಿ–ಎರಡು ಹೆಣ್ಣು ಜೀವ ಒಂದನ್ನೊಂದು ಅಂಟಿ ಕೊಂಡು ನಿಂತ' ಒಂದು ಪುಟ್ಟ ಕುಟುಂಬ. ಅಜ್ಜಿ ಗೋದೂಬಾಯಿ, ಬಾಡಿಗೆ ಮನೆಯಲ್ಲಿ ಊಟದ ಮನೆ ನಡೆಸುತ್ತಾ ತನ್ನ ಮಗಳ ಮಕ್ಕಳನ್ನು ಬೆಳೆಸಿದಳು. ಆಕೆಯ ಜೀವನದ ಕಷ್ಟದ ಕಥೆ ನೆನೆಸಿದಂತೆಲ್ಲಾ, ಆಕೆ ಮಹಾತಪಸ್ವಿನಿ ಎಂದು ಭಾಸವಾಗುವುದು. ಅಜ್ಜಿ ಗೋದುಬಾಯಿ, ಕಷ್ಟದ ಜೀವನದಲ್ಲಿಯೂ, ಸ್ವರ್ಗಸುಖ ಅನುಭವಿಸಿದಳು. ಬಡತನದಲ್ಲಿ ಬಾಳುವುದು ಹೇಗೆ ಎಂಬ ತಂತಿಯ ಮೇಲೆ ನಡೆದಾಡುವ ಕೌಶಲ್ಯವನ್ನು ಬೇಂದ್ರೆ ಅರಿತರು. ಇದರಿಂದ ಅವರಲ್ಲಿ ಧೈರ್ಯ, ಎದೆಗಾರಿಕೆ ರೂಪಗೊಂಡಿತು. ಜೀವನವೇ ಒಂದು ಮಹಾಯಜ್ಞ ಎಂಬ ಸೂತ್ರ ಅವರಿಗೆ ಮಾರ್ಗದರ್ಶಕವಾಯಿತು. ತನ್ನ ಮಗ ಗುರುನಾಥನ ಮೇಲಿನ ಪ್ರೇಮ, ಮಮತೆ, ವಾತ್ಸಲ್ಯ, ಕೃಪೆ, ಮೊಮ್ಮಗನಾದ ಬೇಂದ್ರೆಯವರ ಮೇಲೆ ಸುರಿಸಿದಳು, ಅವಳು ಸಿಂಪಿಯಾಗಿ ರಕ್ಷಿಸಿದಳು; ಬೇಂದ್ರೆ ಸ್ವಾತಿಯ ಮುತ್ತಾಗಿ ಬೆಳೆದರು.

ಬೇಂದ್ರೆಯವರು, ತಮ್ಮ ಅಜ್ಜಿಯಿಂದ ಎಂಥ ಪ್ರಸಂಗದಲ್ಲಿಯೂ ಆತ್ಮಾಭಿಮಾನವನ್ನು ಕಳೆದುಕೊಳ್ಳಬಾರದು, ಯಾರ ಮುಂದೆಯೂ ದೈನ್ಯದಿಂದ ಕೈ ಒಡ್ಡಬಾರದು, ದೈವವನ್ನು ಸಂಪೂರ್ಣವಾಗಿ ನಂಬಿ, ಸಮರ್ಪಣ ಬುದ್ಧಿಯಿಂದ, ಶುದ್ಧಭಾವದಿಂದ, ಪ್ರಯತ್ನದ ಸಾತತ್ಯದಿಂದ ಜೀವನವನ್ನು ಸಾಗಿಸಬೇಕು ಎಂಬ ಪ್ರಥಮ ಪಾಠವನ್ನು ಬೇಂದ್ರೆ ಕಲಿತರು. ಅವರು ತಮ್ಮ ಜೀವನದಲ್ಲಿ ಅನುಷ್ಠಾನ ಮಾಡಿ ಗೆದ್ದರು. ಅಂತಹ ಧಾರ್ಮಿಕ ಕಷ್ಟಸಹಿಷ್ಣು ಕುಟುಂಬದಲ್ಲಿ ಜನಿಸಿ, ನೆಲದ ನೆಲೆಯ ಅನುಭವಗಳನ್ನು ಪಡೆದುದ್ದರ ಫಲವಾಗಿ ಬೇಂದ್ರೆಯವರ ಕಾವ್ಯಗಳಲ್ಲಿ ಅಜ್ಜಿ, ತಾಯಿ, ಪ್ರೇಯಸಿ, ಮಡದಿ, ಮಗಳು, ಸಾಹಿತ್ಯ ಸಹೋದರಿಯರು ಮತ್ತು

ಇತರ ಸ್ತ್ರೀಯರು ಬಂದು ಹೋಗುತ್ತಾರೆ.

## II. ಬೇಂದ್ರೆ ಕಾವ್ಯದಲ್ಲಿ ತಾಯಿ:

ಈ ಭೂಮಿಯ ಮೇಲೆ ಪ್ರಾಣಿಯಾಗಿ ಹುಟ್ಟಿದ ಜೀವವನ್ನು ಮಾನವನನ್ನಾಗಿ ಮಾಡಿದ ಶಕ್ತಿ ತಾಯಿ. ಗಂಡನನ್ನು ಗೃಹಸ್ಥನನ್ನಾಗಿ ಮಾಡಿ, ಮಕ್ಕಳನ್ನು ಹಡೆಯುವ ಸಹಜ ಚೈತನ್ಯ ಪಡೆದ ತಾಯಿ ಜೀವಿಗಳು, ಆ ಕಂದಗಳನ್ನು ರೂಪಿಸುತ್ತಾ ತಮ್ಮ ಜನ್ಮಗಳನ್ನು ಸವೆಸಿವೆ. ಹಾಗೆ ಸವೆಸುತ್ತಾ ಸಂಸ್ಕೃತಿಯನ್ನು ರೂಪಿಸಿವೆ. 'ತಾಯಿ ಈ ನೆಲದ ಸಂಸ್ಕೃತಿ, ನಾಗರೀಕತೆಗೆ ತವರಾಗಿದ್ದಾಳೆ'. ಬೇಂದ್ರೆಯವರಿಗೆ ಹೆಣ್ಣು ಎಂದರೆ ತಾಯಿ, ಅವರು ತಾಯಿಯ ವಿವಿಧ ರೂಪವೇ ಹೆಣ್ಣಾಗಿ–ಅಕ್ಕ, ತಂಗಿ, ಹೆಂಡತಿ, ಮಗಳು ಹಾಗೂ ಇತರ ಸ್ತ್ರೀಯರಾಗಿರುವುದನ್ನು ತಿಳಿಯುತ್ತಾ ತನ್ನ ಬದುಕಿನ ಶೋಧಕ್ಕೆ ತೊಡಗಿದ್ದಾರೆ. ಬದುಕಿನ ಶೋಧದಿಂದ ಸಮಾಜ, ಸಂಸ್ಕೃತಿ, ಕಾವ್ಯಶೋಧದ ಸೂಕ್ಷ್ಮವಲಯವನ್ನು ಪ್ರವೇಶಿಸಿ; ಸಾರ್ವತ್ರಿಕ ಸತ್ಯವನ್ನು ತಮ್ಮ ಕಾವ್ಯದಲ್ಲಿ ನೀಡಿದ್ದಾರೆ. ಬೇಂದ್ರೆಯವರ ಮೊದಲ ಕೃತಿ 'ಕೃಷ್ಣಾಕುಮಾರಿ' (1922) ಒಂದು ಖಂಡಕಾವ್ಯವಾಗಿದೆ. ಅದರಲ್ಲಿ ಅವರು ಪ್ರೇಮ ದೇವತೆಯನ್ನು ಪುರುಷ ಪ್ರಧಾನ ಸಮಾಜ ಬಲಿತೆಗೆದುಕೊಂಡ ದಾರುಣ ಚಿತ್ರಣವಿದೆ.. ಅವರಿಗೆ ಸ್ತ್ರೀಯ ಬಗೆಗಿದ್ದ ಒಲವು, ಆದರ ಕಂಡು ಬರುತ್ತದೆ. ಅವರ 'ಗರಿ' ಕವನ ಸಂಕಲನ (1932) ದಲ್ಲಿ ಅವರ ಚಿಂತನೆಯ ಹಲವು ಮುಖಗಳು ಕಾವ್ಯವಾಗಿ ಪ್ರಕಾಶವಾಗಿವೆ. ಅದರಲ್ಲಿ 'ಗಂಡಸು, ಹೆಂಗಸಿಗೆ, ಎಂಬ ವಾರ್ಧಕಷಟ್ಪದಿಯ ಕವನದಲ್ಲಿ 'ಇಡೀ 'ಸ್ತ್ರೀ' ಸಮೂಹವನ್ನು 'ತಾಯೆ' ಎಂದು ಕರೆದಿದ್ದಾರೆ.

**ತಾಯಿ ಕನಿಮನೆಯೇ ನೀ**
**ತಾಯಿ ಕನಿಮನೆಯೇ ನೀ, ಅಕ್ಕ ಅಕ್ಕರತೆಯೇ**
**ಬಾಯೆನ್ನ ತಂಗಿ ಬಾ ಮುದ್ದು ಬಂಗಾರವೇ**
**ನೀಯೆನ್ನ ಹೆಂಡತಿಯೊ ಮೈಗೊಂಡ ನನ್ನಿಯೋ**
**ಮಗಳೋ ನನ್ನೆದೆಯ ಮುಗುಳೋ ?**
**ಈಯೆನ್ನ ಇರಂವಿಗೆ ಜೀವನದ ಬಾಳ್ವಿಕೆಗೆ**
**ಈಯು ಕೈ ಮೈಗಳಂ ಜೀವಭಾವದಿಂ**
**ಸ್ತ್ರೀಯೆ, ಕಾಪಾಡಿದೌ ಪಾಡಾಗಿ ಮೂಢನನು**
**ತಕ್ಕೈಸಿ ನೂರು ತೆರದಿ'.**

ಬೇಂದ್ರೆಯವರು ತನ್ನೆಲ್ಲ ಪುರುಷ ಪ್ರಧಾನ ಭಾವನೆಗಳನ್ನು ಬದಿಗೊತ್ತಿ, ಸ್ತ್ರೀಶಕ್ತಿಯನ್ನು ಅರಿತು ಅಲ್ಲಿ ನೆಲಸಿರುವ ಕೋಮಲಾಂತಃಕರಣ ಮತ್ತು ಜೀವ ಪೋಷಕ ಸತ್ವದಿಂದ ತಾನು ಪೂರ್ಣನಾಗಲು ಪ್ರಯತ್ನಿಸಿರುವುದನ್ನು ತಿಳಿಯ

ಬಹುದು. ಮಿಂಚಿನ ಹೊಳಪಿನ ಸೃಷ್ಟಿ ಹಾಗೂ ಜ್ಞಾನದ ನೆಲೆ ತಾಯಿ ಎಂದು ತಿಳಿದು 'ತಾಯಿ ಕನಿಮನೆಯೆ ನೀ' ಎಂದಿದ್ದಾರೆ. ಅವರಿಗೆ ತಾಯಿಯೆಂದರೆ ಬೆಳಕು ಮತ್ತು ಜ್ಞಾನ, ಪ್ರೀತಿಯನ್ನು ಸದಾ ಹೊಂದಿರುವ ಅಕ್ಕನು ಅಕ್ಕರತೆಯ ಪ್ರತಿಮೂರ್ತಿ, ಪ್ರೀತಿಯ ತಂಗಿ, ಮುದ್ದು ಬಂಗಾರ, ವ್ಯಕ್ತಿ ಬೆಳೆದು ಯೌವನಸ್ಥನಾದಂತೆ ಹೆಣ್ಣನ್ನು ಹೆಂಡತಿಯಾಗಿ ಕಾಣುತ್ತಾನೆ. ಈ ಹೆಂಡತಿ ಎಂಬುವವಳು ಸತ್ಯ, ಪ್ರೀತಿ, ವಿಶ್ವಾಸವನ್ನೇ ಮೈಗೊಂಡವಳು. ಅವರ ಪ್ರೀತಿಯ ಫಲ ಮಗಳು, ಅವಳು ತನ್ನೆದೆಯ ಮುಗುಳು, ಆನಂದದ ನಗೆ ಎಂದಿದ್ದಾರೆ.

ಬೇಂದ್ರೆಯವರಿಗೆ ತಾಯಿಯ ಇಹಲೋಕ ತ್ಯಜಿಸಿದ್ದು, ಆಘಾತದಂತಾಗಿತ್ತು. ಅದನ್ನು ತಡೆದುಕೊಂಡು 'ತಾಯಿಗೆ ಸಾವಿಲ್ಲ; ತಾಯಿ ಅಮರ ಎಂಬ ಚಿರಂತನ ಸತ್ಯವನ್ನು ಸಾರುವ ಕವಿಭಾವ, ಅನುಭಾವವಾಗುವುದನ್ನು, ದೃಗ್ಗೋಚರವಾಗುವಂತೆ, ಸ್ಪರ್ಶಾನುಭವವಾಗುವಂತೆ ಕಾವ್ಯದಲ್ಲಿ ಮೋಡಿ ಮಾಡಿದ್ದಾರೆ.

**ಮೈಗೊಟ್ಟ ತಾಯಿಯು ಮೈಬಿಟ್ಟು ಹೋಗುವಳೆ ?**
**ಏನೇನೊ ಎಂದೆಂದು ನಾನತ್ತೆನು.**
**ಮೈಮರೆತು, ಮೈ ಅರಿತು, ಮೈ ಬೆವೆತು, ಮನ ಬೆರೆತು**
**ಕಣ್ಣೀರ ಧಾರೆಯಲೆ ನೀರ್ಬಿಟ್ಟೆನು.**

ತನಗೆ ಜನ್ಮ ನೀಡಿದ ತಾಯಿಯು ಸದಾ ಚಿರಸ್ಥಾಯಿ. ಆಕೆ ನನ್ನ ಮೈ ಮನಸ್ಸಿನಲ್ಲಿಯೇ ಇದ್ದಾಳೆ. ತಮಗೆ ಭಾವ ಕಲ್ಲೋಲವಾದಾಗ, 'ಮೈಮರೆತು, ಮೈ ಅರಿತು, ಮೈ ಬೆವತು, ಮನ ಬೆರೆತು' ಎಂಬ ನುಡಿಯಲ್ಲಿ ಆ ಮರೆವು, ಅರಿತು ಕೂಡಿ ಆಡುವ ಚಿಂತನೆಯು ಮೈ ಗೂಡಿ ಬಂದಿದೆ. ಆ ಚಿಂತನೆಯ ಕಾವಿಗೆ ಮೈ ಮನಸ್ಸು ಬೆವರಿದೆ. ಅಗಲಿದ ತಾಯಿಗೆ ತರ್ಪಣವನ್ನು ಬಿಡುತ್ತಿದೆ ಎಂಬ ಭಾವದಲ್ಲಿ ಕವಿ 'ಕಣ್ಣೀರಧಾರೆಯಲೆ ನೀರ್ಬಿಟ್ಟೆನು ಎಂದಿದ್ದಾರೆ. ಹೀಗೆ ಬೇಂದ್ರೆಯವರು ತಾಯಿಯ ಮಮತೆಯ ಮಹತ್ವವನ್ನು ತಿಳಿಸುತ್ತಾ, ತಾಯಿಯ ಪಾದದ ಮೇಲೆ ಉರುಳಿದೆ, ಹೊರಳಿದೆ, ತಲೆಯಿಟ್ಟೆ, ಕೈಯಿಟ್ಟೆ, ಮುದ್ದಾಡಿದೆ ಎಂದಿದ್ದಾರೆ. ಹಾಗೆಯೇ 'ಕರುಳಿನ ಸಂಬಂಧ ತಿಳಿಯುವುದು ಕರುಳಿಗೆ, ತಲೆಗೇನು ಕಂಡೀತು ಅದರ ತಲೆ', ಆದರೂ, ಏನೇನೋ ಆದರು, ಮೈಯಂಥ, ಮೈಗೂನು ಹೊಳೆಯುವುದದರ ನೆಲೆ ಎಂಬ ನುಡಿಗಳು ಅರ್ಥಪೂರ್ಣವಾದವುಗಳು.

## III. ಬೇಂದ್ರೆ ಮತ್ತು ಪ್ರೇಯಸಿ:

ನಿತ್ಯ ಜೀವನದಲ್ಲಿಯ ಗಂಡು–ಹೆಣ್ಣು ಪರಸ್ಪರರ ಗುಣಗಳನ್ನು ಮೆಚ್ಚಿ ಒಲಿದಾಗ ಪ್ರಿಯಕರ–ಪ್ರಿಯೆ, ನೀರ–ನೀರೆಯಾಗಬಹುದು. ಪ್ರೇಮದಲ್ಲಿ ಆಕಾಂಕ್ಷೆ

ಮೊದಲ ಹೆಜ್ಜೆ,

**ವಾರಿನೋಟ ಹಾರುತ್ತಿತ್ತೋ ಹೋಳಿಮ್ಯಾಗ**
**ಹೊಸಾ ಹರೆ ಈಸುತಿತ್ತೊ ಹೊಳಿಯಾಗ**

ಈ ಮೇಲಿನ 'ವಾರಿನೋಟ' ಕವನ ಸಂಕಲನದಲ್ಲಿ 'ಯೌವನದ ಹೆಣ್ಣು ತನ್ನೆಲ್ಲ ಬೆಡಗು ಬಿನ್ನಾಣದಿಂದ ಹೋಗುವ ನೆಲದ ಮೇಲೆ ನಡೆದಂತಿರುವುದಿಲ್ಲ. ಅದೂ ಹೊಳೆಯ ದಂಡೆಯ ಮೇಲೆ ನಡೆವಾಗ ಹಾರಿದಂತಿರುತ್ತದೆ. ಅವಳಿಗೆ ಗಂಡಿನ ಬಗ್ಗೆ ಸಹಜ ಆಕರ್ಷಣೆ ಇದು ಅವಳ ವಾರಿನೋಟವಾಗಿರುತ್ತದೆ.

**ನಾರೀ ನಿನ್ನ ಮಾರಿಮ್ಯಾಗ**
**ನಗೀ ನವಿಲು ಆಡತಿತ್ತ**
**ಆಡತಿತ್ತ ಓಡತಿತ್ತ**
**ಮುಗಿಲ ಕಡೆಗೆ ನೋಡತಿತ್ತ**

ಬೇಂದ್ರೆಯವರ 'ನಗೀ ನವಿಲು' ಕವನದಲ್ಲಿ ಅವಳ ಯೌವನ, ಶರೀರ ಮತ್ತು ಮುದುಡಿದ ಮನಸ್ಸನ್ನು ನವಿಲು ಮತ್ತು ಕೋಕಿಲವಾಗಿಸಿ ಇಡೀ ಕವನವನ್ನು ಒಂದು ರೂಪಕ ಕಾವ್ಯವಾಗಿಸಿದ್ದಾರೆ, ನಲ್ಲನ ಬರುವಿಕೆಗೆ ಆಶಿಸುತ್ತಾ, ಭರವಸೆಯ ನೋಟವನ್ನು ಬೀರುತ್ತಾ, ಮುಖದಲ್ಲಿ ನಗೆಯನ್ನು ಬೀರಿದ್ದಾಳೆ.

## IV. ಬೇಂದ್ರೆ ಮತ್ತು ಮಡದಿ:

'ಒಲವೆ ನಮ್ಮ ಬದುಕು' ಎಂದು ಸಾರಿದ ಬೇಂದ್ರೆಯವರ ಕವನಗಳು ಪತಿ–ಪತ್ನಿಯರ ಸ್ನೇಹ ಸಂಬಂಧದ, ಪರಸ್ಪರರು ಅರಿತು ಬಾಳುವ, ಬದುಕಿನಲ್ಲಿ ನಗುತ್ತ ಬಾಳ್ವೆ ಮಾಡುವ, ಎದೆ ಹಿಗ್ಗಿಗಾಗಿ ಆಶಿಸುವ ಚಿಂತನೆಯನ್ನು ಹೊಂದಿವೆ. ಅವರು ತಮ್ಮ ಪತ್ನಿಯನ್ನು ಜೀವದ ಗೆಳತಿ, ಸಖೀ ಎಂದು ಕರೆದು ಸಖ್ಯಭಾವದ ಆರಾಧಕರಾಗಿದ್ದಾರೆ.

**ಮುತ್ತಿಗು ಮಿಗಿಲಾಗಿ ಹೂವೀಗು ಹಿರಿದಾಗಿ**
**ಬೆವರ್ಹನಿ ಬಾಸಿಂಗ ತುಳುಕುತಿರೆ**
**ನತ್ತನು ನಾಚಿಸಿ ಬೆವರಿನ ಹನಿಯೊಂದು**
**ಮೂಗು ಬುಟ್ಟಿನ ಅಂದ ಮಿನುಗಿತಿರೆ**

ಕವಿಯು ತನ್ನ ಪ್ರಿಯ ಸಖಿಯು ಭೌತಿಕ ಒಡವೆಗಳಿಂದ ಶೃಂಗಾರ ಗೊಂಡಿರುವುದಕ್ಕಿಂತ ನಿಸರ್ಗಸಹಜ ಸೌಂದರ್ಯದಲ್ಲಿ ಪಲ್ಲವಿಸುತ್ತಿರುವುದನ್ನು ಕಂಡು ಬಣ್ಣಿಸಿರುವುದು ರೂಪಕ ಶಕ್ತಿಯು ಸಹಜವಾಗಿ ಮೂಡಿ ಬಂದಿರುವುದಕ್ಕೆ ಪುರಾವೆಯಾಗಿದೆ. ಅದು ವಿಕಾಸಗೊಂಡು ಈ ಕಾವ್ಯದಲ್ಲಿ 'ಸೌಂದರ್ಯವೆಂಬುದು

ಕಣ್ಣಿನ ತುತ್ತಲ್ಲ ! ಕಣ್ಣಿಗು ಕಣ್ಣಾಗಿ ಒಳಗಿಹುದು' ಎಂಬ ತಾತ್ವಿಕ ಚಿಂತನೆಯನ್ನು ನೀಡುತ್ತದೆ. ಸಖೀ ಗೀತ ಸೂಕ್ಷ್ಮ ಮನಸ್ಸಿನ ಮಡದಿಯನ್ನು ತಿಳಿಯಲು ಪ್ರಯತ್ನಿಸುವ ಪ್ರಯತ್ನದಂತೆ ಅದರ ಒಡಲಿನಲ್ಲಿ ಕಾವ್ಯ ದೇವತೆಯ ಉಪಾಸನೆಯಲ್ಲಿ ತೊಡಗಿ ಕೊಂಡ ಕವಿಯ ಸೃಜನಶೀಲತೆಯನ್ನೂ ಒಳಗೊಂಡಿದೆ.

## V. ಬೇಂದ್ರೆ ಮತ್ತು ಮಗಳು, ಸಾಹಿತ್ಯ ಸೋದರಿಯರು:

ಬೇಂದ್ರ ತನ್ನ ತಾಯಿಯನ್ನು ತನ್ನ ಮಗಳಲ್ಲಿ ಕಂಡು ಅವಳೇ ಮಗಳಾಗಿ, ತಾಯಿಯಾಗಿ ಆನಂದವನ್ನು ನೀಡಿರಬಹುದೆಂದು ಭಾಸವಾಗುತ್ತದೆ. ಅದಕ್ಕಾಗಿ ಅವರು

**'ತಾಯಾಗಿ ಹಾಯಾಗಿ ತಾನೆ ಆಡುತ್ತಾ**
**ನೀನು ಲೀಲೆಯೊಳಿದ್ದೆ ಮಗುವ ನೋಡುತ**
**ಆಗ ನಿನ್ನಾ ರೂಪ ಏನು ರೂಪ !**
**ರಾಣಿ ಎನ್ನಬಹುದಾಗಿತ್ತು ರಾಜಭೂಪ**
**ನಿನ್ನ ರೂಪಕೆ ತಕ್ಕ ನಿನ್ನ ಮಗವು**
**ಸುಖದ ಮುಖದೊಳಗುಕ್ಕಿ ಬಂದಂತೆ ನಗುವು'**

ಎಂಬುದನ್ನು 'ಒಂದು ಕನಸಿನ ಕಥೆ' ಎಂಬ ಕಥನ ಕವನದಲ್ಲಿ ತಿಳಿಸಿದ್ದಾರೆ. ಭಾವಗಳಿಗೆ ಬಣ್ಣ ಮೂಡಿತ್ತು, ರಸ ಸರಸವಾಡುವೊಲು ಜೀವಗೂಡಿತ್ತು' ಎಂಬಂತೆ ಕವಿಯ ಒಳಭಾವಾಭಿವ್ಯಕ್ತಿಯು ಗೂಢವಾಗಿಯೇ ಇರುವುದನ್ನು ಕಾಣಬಹುದಾಗಿದೆ. ಬೇಂದ್ರೆಯವರಿಗೆ ಮಗಳ ನಗೆ ಎಂದರೆ ಆನಂದ, ನಗೂ ನಗೂ ಹಾಗೆ ನಗು, ಆಡು ಮಗಳೆ ಮಂಗಳಾ' ಎಂದು ಆ ನಗೆಯ ಆಟದಲ್ಲಿ ತಮ್ಮೆಲ್ಲ ನೋವನ್ನು ಮರೆತು ಆನಂದಿಸುತ್ತಿದ್ದರು.

**ಸಾಹಿತ್ಯ ಸಹೋದರಿಯರು:** ಬೇಂದ್ರೆಯವರಿಗೆ ಒಡಹುಟ್ಟಿದ ಸಹೋದ ರಿಯರಿರಲಿಲ್ಲ ಅಂದರೆ ದೇಹ ಪ್ರೀತಿಯಿಲ್ಲದ ಸಹೋದರತ್ವದ ಅಕ್ಕ-ತಂಗಿಯರ ಒಲವಿನ ನಿಜ ಪ್ರೀತಿ ಸಾಹಿತ್ಯ ಸಹೋದರಿಯರಿಂದ ಸಿಕ್ಕಿತ್ತು. ಆ ಧನ್ಯ ಭಾವದಲ್ಲಿ ಕನ್ನಡ ತಾಯಿಯ ಒಡಲಲ್ಲಿ ಹುಟ್ಟಿದ ಜಾನಕಮ್ಮ, ಕೊಡಗಿನ ಗೌರಮ್ಮ, ತಿರುಮಲೆ ರಾಜಮ್ಮ ಮುಂತಾದ ಸಹೋದರಿಯರ ವ್ಯಕ್ತಿತ್ವದ ಆರಾಧನೆಯಾಗಿ ಬೇಂದ್ರೆಯವರು ಕವನಗಳನ್ನು ರಚಿಸಿದರು.

ಕೊಡಗಿನ ಗೌರಮ್ಮ, ನೀರಿನಲ್ಲಿ ಮುಳುಗಿ ತೀರಿಕೊಂಡ ಸಂದರ್ಭದಲ್ಲಿ ಅವರ ಸ್ಮರಣದ ಕವನ 'ತಂತಿ ಗೌರಮ್ಮ' ದಲ್ಲಿ ಗೌರಮ್ಮನನ್ನು ಕುರಿತು

**ಗೌರವಸ್ತ್ರ ಗೌರಸ್ಮಿತ ಗೌರವದೀ ಗೌರೀ**

**ಮಿಂಚಿದಳದೊ, ಬಾನಂಚಿಗೆ ಕಾವೇರಿಯ ಕುವರಿ !**

ಎಂದು ಬಣ್ಣಿಸುತ್ತ ಅವಳ ಹೆಣ್ಮನದ, ಕರುಣಭಾವದ ಕಥೆಗಳ ವಿಮರ್ಶೆಯನ್ನು ಕಾವ್ಯದಲ್ಲಿ ಹೀಗೆ ಹಿಡಿದಿಟ್ಟಿದ್ದಾರೆ. ಹೀಗೆ ಬೇಂದ್ರೆಯವರು ಸ್ತ್ರೀಪರ ಚಿಂತಕರಲ್ಲದೇ, ಅನಾಥ ಹೆಂಗಸರಿಗೆ ಕೈಲಾದ ಸಹಾಯವನ್ನು ಮಾಡುತ್ತಿದ್ದರು.

**ಸಮಾರೋಪ:**

ಬೇಂದ್ರೆಯವರು ತಮ್ಮ ಕಾವ್ಯದಲ್ಲಿ ನೆಲದ ಮತ್ತು ನೆಲೆಯ ಅನುಭವವನ್ನು ಪಡೆಯುತ್ತಾ, ಸ್ತ್ರೀಯನ್ನು ತಾಯಿಯಾಗಿ, ಪ್ರೇಯಸಿಯಾಗಿ, ಮಡದಿಯಾಗಿ, ಮಗಳಾಗಿ, ಸಾಹಿತ್ಯ ಸಹೋದರಿಯಾಗಿ, ಕಂಡ ವಿವಿಧ ಮುಖಗಳ ಭಾವಗಳನ್ನು ತಮ್ಮ ಕಾವ್ಯದಲ್ಲಿ ಸೆರೆಹಿಡಿದಿದ್ದಾರೆ. ಬೇಂದ್ರೆಯವರು, ಸ್ತ್ರೀಯ ವ್ಯಕ್ತಿತ್ವ ವಿಕಾಸ, ಬೌದ್ಧಿಕ ಕುಶಲತೆ ಮತ್ತು ತನ್ನಲ್ಲಡಗಿರುವ ಕಲಾಚಾತುರ್ಯದಿಂದ ಬಾಳಬೇಕು. ಸ್ತ್ರೀಯರ ವೈಯಕ್ತಿಕ ನೋವು ಪ್ರಕಟವಾಗಿ, ಅದು ಸಾರ್ವತ್ರಿಕಗೊಳಿಸಬೇಕು, ಆಕೆ ಸಾರ್ವತ್ರಿಕ ಬದುಕಿನಲ್ಲಿ ತನ್ನನ್ನು ತಾನು ಗುರುತಿಸಿಕೊಳ್ಳಬೇಕೆಂಬ ಮನೋಭಾವವನ್ನು ಹೊಂದಿದ್ದರು. ವೈಯಕ್ತಿಕ ವಿಕಾಸದೊಂದಿಗೆ ಸ್ತ್ರೀಯರು ಸಾಮಾಜಿಕವಾಗಿ ವಿಕಾಸಗೊಂಡು, ಹೃದಯ ವಿವೇಕದ ವಿಕಾಸ ಬೆಳಕು ಎಂಬುದು ಬೇಂದ್ರೆಯವರ ಕಾವ್ಯದ ಸ್ಥಾಯಿ ಚಿಂತನೆಯಾಗಿದೆ.

**ಪರಾಮರ್ಶನ ಗ್ರಂಥಗಳು:**


1. ಕೃಷ್ಣಪ್ಪ ಜಿ. (2012). ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ ಒಂದು ಅಧ್ಯಯನ. ಕಾಮಧೇನು ಪುಸ್ತಕ ಭವನ. ಬೆಂಗಳೂರು.
2. ಬೇಂದ್ರೆ ದ. ರಾ. (1990). ಸಖೀಗೀತ. ಶ್ರೀಮಾತಾ ಪ್ರಕಾಶನ. ಧಾರವಾಡ.
3. ಬೇಂದ್ರೆ ದ. ರಾ. (1989). ಗರಿ. ಶ್ರೀಮಾತಾ ಪ್ರಕಾಶನ. ಧಾರವಾಡ.
4. ಬೇಂದ್ರೆ ದ. ರಾ. (1989). ಗಂಗಾವತರಣ. ಶ್ರೀಮಾತಾ ಪ್ರಕಾಶನ. ಧಾರವಾಡ.
5. ಬೇಂದ್ರೆ ದ. ರಾ. (1974). ಸಾಹಿತ್ಯದ ವಿರಾಟ್ ಸ್ವರೂಪ. ಸಮಾಜ ಪುಸ್ತಕಾಲಯ. ಧಾರವಾಡ.